ಬರಬಾರದು ಅನ್ನುವ ಎಚ್ಚರಿಕೆಯೊಂದು ಆಗಾಗ ನಮಗ ತಿವೀತಿರ್ತದ. ಮುಂಜೇನಿ ವ್ಯಾಳೆದಾಗ ನಾವು ನಾವಾಗೂದೇ ಇಲ್ಲ. ಕುರ್ಚಿಗೆ ಬೆನ್ನಾನಿಸಿ, ಕೈಯ್ಯಾಗ ಪೇಪರ್ ಹಿಡ್ಕೊಂಡು ಹೊಗಿಯಾಡುವ ಛಾ ಕುಡ್ಕೊಂತ ಕುಂದ್ರೂದು ಇನ್ನು ಯಾವ ಕಾಲಕ್ಕೋ ಅಂತ ಅನಸ್ದೇ ಇರದು. ಆದ್ರ ಹಂಗೆಲ್ಲ ಭಾಳ ಅನುಕಂಪ ಪಟ್ಕೊಂತ ಕೂರುವ ಹಂಗಿಲ್ಲ ನಾವು... ನಡೆ ಮುಂದೆ ನಡೆ ಮುಂದೆ... ನುಗ್ಗಿ ನಡೆ ಮುಂದೆ... ಅಂತ ಧಾವಂತದೊಳಗ ಓಡ್ಕೊಂತ ಇರಬೇಕು. ಒಂದೇ ಒಂದು ಹೆಜ್ಜಿ ಸಾವಕಾಶ ಆದ್ರೂ ದಿನಾ ಹೋಗುವ ಬಸ್ ಸಿಗೂದಿಲ್ಲ. ಬಸ್ ಸಿಗ್ಲಿಕ್ರ ಆಟೊ ಹಿಡೀಬೇಕು. ಆಟೊ ಹಿಡೀಬೇಕಂದ್ರ ನಮ್ಮ ಸಂಚಿಯೊಳಗಿಂದ ಒಂದರೆ ನೀಲಿನೋಟು ಹೊರಗ ಬರ್ಬೇಕು. ಆಟೊ ಲಗೂ ಸಿಗ್ಲಿಕ್ರ ಟ್ಯಾಕ್ಸಿ ನೋಡಬೇಕು. ಈ ಟ್ಯಾಕ್ಸಿ ಬುಕ್ ಮಾಡೂಮುಂದ ಫೋನಿನೊಳಗ ಸೊನ್ನೆ ಸುತ್ತತಿರ್ತದ... ನೆಟ್‌ವರ್ಕ್ ತೋರಸಾಕ... ಅದ್ಯಾಕೋ ಆ ಕ್ಷಣಕ್ಕ ನಮ್ಮದೆಲ್ಲವೂ ಶೂನ್ಯ ಸಂಪಾದನೆ ಅನಸಾಕ ಸುರು ಆಗ್ತದ. ಮತ್ತ ಅದೇ ಹತಾಶೆಯ ಸುಳಿಯೊಳಗ ಹರದು ಹೋಗೂಹಂಗಿರ್ರಿ ನಾವು... ಈಗಾಗ್ಲೇ ಕಳಕೊಂಡಿರುವ ನಿಮಿಷಗಳನ್ನು ಗಳಸೂದೆಲ್ಲಿ, ಯಾವ ಕೆಲಸಾ ಎಷ್ಟು ಲಗೂ ಮುಗಸಬೇಕು ಅನ್ನೂ ಲೆಕ್ಕಾಚಾರದಾಗ ತೇಲ್ತೀವಿ.

ದಿನಾಲೂ ಆಫೀಸಿಗೆ ಹೋಗಿ ನಕ್ಕು, ಏನು ತಿಂಡಿ ಮಾಡಿದ್ರು, ನಾವೇನು ಮಾಡಿದ್ವಿ, ಡಬ್ಬಿಗೇನಿಟ್ವಿ, ಮಕ್ಕೇನಂದ್ರು ಅಂತ ಮಾತಾಡ್ಕೊಂತ ಕಂಪ್ಯೂಟರ್ ಆನ್ ಮಾಡೋರು... ಹಿಂಗ ಒಂದೀಟು ನಿಮಿಷ ಕಳಕೊಂಡಾಗ ಅಕ್ಕ ಪಕ್ಕ ಒಂದು ನಗು ವಗಾಯ್ಸಿ ಕೆಲಸಕ್ಕ ಕುಂತು ಬಿಡ್ತೀವಿ.

ಧಡಬಡ ಧಡಬಡ ಕೆಲಸಾ ಮುಗಸ್ಬೇಕು. ಅದೂ ಕಾಟಾಚಾರಕ್ಕ ಅನ್ನೂಹಂಗಲ್ಲ. ಅದರೊಳಗೂ ನಮ್ಮತನಾ ತೋರಸ್ಲೇಬೇಕು. ಸೋಮಾರಿ ಇರ್ತೀವೋ, ಕೆಲಸಗಳ್ಳರು ಆಗಿರ್ತೀವೋ ಅಥವಾ ಮಿಠ್ಠಾ ಮಿಠ್ಠಾ ಮಾತಾಡ್ಕೊಂತ ನಮ್ಮ ಕೆಲ್ಸಾ ಇನ್ನೊಬ್ಬರಿಂದ ಮಾಡಸ್ಕೋತೀವೋ... ಅದೆಲ್ಲ ಎರಡನೆಯ ವಿಚಾರ ಆದ್ರ ನಮ್ಮ ಪಾಲಿನದ್ದಂತೂ ಮುಗಿಸಿರ್ತೀವಿ.

ಸ್ವತಂತ್ರ ಅಂದಾಗೆಲ್ಲ ಈ ಟೇಬಲ್ ಹಿಂದಿನ ಹೆಣ್ಮಗಳು ನೆನಪಾಗ್ತಾಳಲ್ಲ... ಅಕಿನ ಒಳಗ ಮಾತ್ರ ಗೃಹವಾದಿನಿ ಭೂತ ಅಕೀಗೆ ಬಂಧಿಸಿಟ್ಟಿರ್ತದ. ಒಂದ್ಸಲೆ ಮನೀಗೆ ಫೋನು ಮಾಡಬೇಕು... ಮಕ್ಕಳು ಬಂದಾವೋ ಇಲ್ಲವೋ, ಡ್ರೆಸ್ ಚೇಂಜ್ ಮಾಡಿರ್ತಾವೋ ಇಲ್ಲೋ... ಹಾಲು ಕುಡೀತಾವೋ ಇಲ್ಲಾ ಅಮ್ಮ ಇಲ್ಲ ಅಂತ ಚಾ ಕುಡೀತಾವೋ? ಇಂಥವೇ ಹತ್ತು ಹಲವು ಚಿಂತಿಯೊಳಗ ಬಂಧಿತಳು. ಆದ್ರೂ ಸ್ವತಂತ್ರ, ಸ್ವಂತ ಅನ್ನೂ ಪದ ದೂರ ನಿಂತು ನಗ್ತಿರ್ತಾವ...

ಊಹೂಂ... ಆಕಡೆ ಭಾಳತ್ತ ನೋಡೂ ಹಂಗಿಲ್ಲ. ನಗೋರು ನಗ್ಲಿ. ಟೀಕೆ ಮಾಡೋರು ಮಾಡ್ಲಿ. ಅವೆರಡೂ ನನ್ನ ದಾರಿಯೊಳಗಿನ ಮೈಲಿಗಲ್ಲಿದ್ದಂಗ ಅಷ್ಟೆ! ಅಲ್ಲಿ ಇಲ್ಲಿ ಕಾಣ್ತಾವ. ಒಮ್ಮೆ ಗುರಿಕಡೆಗೆ ಕಣ್ಣಾಯಿಸಿ ಮುಂದ ಹೊಂಟ್ರ ಅವು ತಾನೇ ಹಿಂದ ಸರೀತಾವ... ಥೇಟ್ ರಸ್ತೆ ಪಕ್ಕದಾಗ ಬರುವ ಮೈಲಿ ಗಲ್ಲಿನ್ಹಂಗೆನೆ ಇವು. ನಾವು ಮುಂದೋಡಾಕ ಸ್ವತಂತ್ರರು.

ಮುಂದೋಡೂದು... ಓಡೂದು ಓಡೂದು... ಟಿಕ್‌ಟಿಕ್‌ಟಿಕ್ ಪಕ್ಕಾ ಗಡಿಯಾರದೊಳಗಿನ ಮುಳ್ಳಿನ ಹಂಗ. ಮನೀಗೆ ಹೋಗೂಮುಂದೂ ಒಂದೆಚ್ಚರಿಕೆ ಕಾಯ್ತಿರ್ತದ. ಗಂಡನಿಗಿಂತ ಮೊದಲು ಮನಿ ಮುಟ್ಟಬೇಕು. ಇಲ್ಲ, ನಮ್ಮ ಕೆಲಸ ಅದಕ್ಕ ಪರವಾನಗಿನ ಕೊಡೂದಿಲ್ಲ ಅಂದ್ರೂ ಸಿಂಡ್ರೆಲ್ಲಾನ ಗಡಿಯಾರದ ಮುಳ್ಳು ನೋಡ್ಕೊಂತನೆ ಮನೀಗೆ ಓಡಿ ಹೋಗೂದು.

ಮಜಾ ಅನಸೂದು ಇಲ್ಲೇನೆ. ಉಳದೋರಹಂಗೆ ನಾವೂನು ದುಡದು ಬಂದಿರ್ತೀವಿ. ನಾವೂ ಅರಾಮಗೆ ಕುರ್ಚಿಗೆ ಬೆನ್ನಾನಿಸಿ, ಒಂದು ಲೋಟ ನೀರು ಕುಡುದು, ಅದು ಗಂಟಲಿನಿಂದ